ಅ) ಹಾಗಿಲ್ಲದ್ದಿದ್ದಲ್ಲಿ ಪೂರ್ತಿ ಮುಗಿಯಲು ಇನ್ನೂ ಎಷ್ಟು ಸಮಯ ಬೇಕಾಗುತ್ತದೆ. ಹಾಗೂ ಅದಕ್ಕೆ ತಗಲುವ ಒಟ್ಟು ಅಂದಾಜು ವೆಚ್ಚವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಸ್ಥಗಿತಗೊಂಡಿರುವುದಿಲ್ಲ. ತುಮಕೂರು ಶಾಖಾ ನಾಲೆಯ 125ನೇ ಕಿ.ಮೀ. ವರೆಗಿನ ಮಣ್ಣು ಅಗೆತದ ಕೆಲಸ ಹಾಗೂ ಅಡ್ಡಮೋರಿ ಕೆಲಸಗಳು (ಲೈನಿಂಗ್ ಹೊರತು ಪಡಿಸಿ), ಒಂದೆರಡು ಕಿ.ಮೀ. ಹೊರತುಪಡಿಸಿ ಮುಕ್ತಾಯಗೊಂಡಿರುತ್ತವೆ. ಈ ಒಂದರಡು ಕಿ.ಮೀ.ಕಾಮಗಾರಿಯ ಕೆಲಸ ಸಹ ತ್ವರಿತಗತಿಯಲ್ಲಿ ನಡೆಯುತ್ತಿವೆ. ನಾಗಮಂಗಲ ಶಾಖಾ ನಾಲೆಯ 43 ಕಿ.ಮೀವರೆಗಿನ ಎಲ್ಲಾ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ.

ಆ) ತುಮಕೂರು ಶಾಖಾ ನಾಲೆಯ 125ನೇ ಕಿ.ಮೀ. ಹಾಗೂ ನಾಗಮಂಗಲ ಶಾಖಾ ನಾಲೆಯ 43ನೇ ಕಿ.ಮೀ.ನ ಮುಂದಕ್ಕೆ ಬರುವ ನಾಲಾ ಕಾಮಗಾರಿಗಳನ್ನು ಹಂತ ಹಂತವಾಗಿ ಆದಷ್ಟು ಬೇಗ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ, 400 ಕೋಟಿಗಳೆಂದು ಅಂದಾಜಿಸಲಾಗಿದೆ.

ರಾಜ್ಯದಲ್ಲಿ ಕೆರೆಗಳ ಹೂಳೆತ್ತುವ ಕಾರ್ಯ

293 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೆರೆಗಳ ಹೂಳೆತ್ತುವ ಕಾರ್ಯಕ್ಕೆ, ವಿಶ್ವ ಬ್ಯಾಂಕಿನಿಂದ ದೊರಕಿರುವ ಸಹಾಯಧನ ಎಷ್ಟು,ಯಾವಾಗ, ಇದನ್ನು ಎಷ್ಟು ಜಿಲ್ಲೆಗೆ ಕೊಡಲಾಗಿದೆ,

ಆ) ಇದುವರೆಗೂ ಎಷ್ಟು ಕೆರೆಗಳಲ್ಲಿ ಹೂಳೆತ್ತುವ ಕಾರ್ಯನಡೆದಿದೆ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ವಿಶ್ವಬ್ಯಾಂಕಿನಿಂದ ಹೂಳೆತ್ತುವ ಕಾರ್ಯಕ್ಕೆ ಯಾವುದೇ ಸಹಾಯಧನ ದೊರೆತಿರುವುದಿಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಸಿವಿಲ್ ಪೋಲೀಸ್ ಕಾನ್ಸ್‌ಟೇಬಲ್ ನೇಮಕಾತಿ.

294 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1993 ರಂದು ನಡೆದ ಸಿವಿಲ್ ಪೋಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಕುರಿತು ಎಷ್ಟು ಜನ ಅಭ್ಯರ್ಥಿಗಳು ಆಯ್ಕೆಯಾಗಿದ್ದರು ?

ಆ) ಅವರುಗಳಲ್ಲಿ ಎಷ್ಟು ಜನ ಅಭ್ಯರ್ಥಿಗಳಿಗೆ ಕೆಲಸಕ್ಕೆ ಹಾಜರಾಗಲು ಅವಕಾಶ ಸಿಕ್ಕಿರುತ್ತದೆ.